


C&A

# ಸರಕು ಪೂರೈಕೆಗೆ ನೀತಿಸಂಹಿತೆ

<u>ಗಮನಿಸಿ:</u> ಇದು ಒಂದು ಆಂಗ್ಲಭಾಷೆಯ ವಿಷಯವಸ್ತುವಿನ ಭಾಷಾಂತರ. ಮೂಲ ಆಂಗ್ಲ ಆವೃತ್ತಿಯೇ ಕಾನೂನುಸಮ್ಮತ ದಾಖಲೆಯಾಗಿರುತ್ತದೆ

- ಏಪ್ರಿಲ್ 2015 -

# ಪೀಠಿಕೆ

## ಖರೀದಿಸಬಹುದಾದ ಬೆಲೆಗಳಲ್ಲಿ ಉನ್ನತ ಗುಣಮಟ್ಟದ ಫ್ಯಾಶನ್ ಉತ್ಪನ್ನಗಳನ್ನು ಒದಗಿಸುವುದು C&A ಯ ವ್ಯಾಪಾರ ಮಾದರಿಯಾಗಿದೆ.

ಜನರಲ್ಲಿ ಮತ್ತು ಪರಿಸರದಲ್ಲಿ ಗೌರವವನ್ನು ಇಟ್ಟುಕೊಂಡು ಈ ರೀತಿ ನಿರಂತರವಾಗಿ ನಡೆಸಿಕೊಂಡು ಹೋಗುವುದಕ್ಕೆ, ಅದೇ ಸಮಯದಲ್ಲಿ ಉನ್ನತ ಮಟ್ಟದ ವ್ಯಾಪಾರ ಪ್ರಾಮಾಣಿಕತೆಯನ್ನು ಅನುಸರಿಸುವುದಕ್ಕೆ ನಾವು ಬದ್ಧರಾಗಿದ್ದೇವೆ. C&A ಮತ್ತು ಅದರ ಪೂರೈಕೆದಾರರು ದೀರ್ಘಾವಧಿಯಲ್ಲಿ ಯಶಸ್ಸು ಗಳಿಸಿಕೊಂಡು ಮುಂದುವರಿಯುವುದಕ್ಕೆ ಇದೊಂದೇ ಮಾರ್ಗ ಎಂದು ನಾವು ದೃಢವಾಗಿ  ನಂಬಿರುತ್ತೇವೆ.

ಸರಕು ಪೂರೈಕೆಗೆ ನೀತಿಸಂಹಿತೆ ('ದಿ ಕೋಡ್ ಆಫ್ ಕಾಂಡಕ್ಟ್') ಪೂರೈಕೆದಾರರಿಂದ ಕಾನೂನು ಅನುಸರಣೆ, ಕಾರ್ಮಿಕ ಧೋರಣೆಗಳು, ಪರಿಸರದ ಬಗ್ಗೆ ಮನೋಭಾವನೆಗಳು ಮತ್ತು ಭ್ರಷ್ಟಾಚಾರ-ವಿರೋಧ ಇವುಗಳ ಬಗ್ಗೆ C&A ಏನನ್ನು ನಿರೀಕ್ಷಿಸುತ್ತದೆ ಎಂಬುದನ್ನು ವಿವರಿಸುತ್ತದೆ. ಗುಣಮಟ್ಟ ಮಾನದಂಡಗಳು, ಉತ್ಪನ್ನ ಮಾನದಂಡಗಳು ಮತ್ತು ವಿತರಣೆ ಸೂಚನೆಗಳು ಮುಂತಾದ ಇತರ ವಿಷಯಗಳ ಬಗ್ಗೆ ನಿರೀಕ್ಷೆಗಳನ್ನು ಇತರ ಧೋರಣೆಗಳು ಮತ್ತು ಮಾರ್ಗದರ್ಶನಗಳಲ್ಲಿ ವಿವರಿಸಲಾಗಿದೆ.

ನೀತಿಸಂಹಿತೆಯಲ್ಲಿನ ಅಗತ್ಯಗಳನ್ನು ನೀತಿಸಂಹಿತೆಗೆ ಹೆಚ್ಚುವರಿ ಮಾರ್ಗದರ್ಶನಗಳು ಎಂಬ ದಾಖಲೆಯಲ್ಲಿ ವಿವರಿಸಲಾಗಿದೆ.

C&A[1] ಗಾಗಿ ಸರಕುಗಳನ್ನು ತಯಾರಿಸುವ ಎಲ್ಲಾ ಪೂರೈಕೆದಾರರಿಗೂ ಈ ಅಗತ್ಯಗಳು ಅನ್ವಯವಾಗುತ್ತದೆ. ನೀತಿಸಂಹಿತೆಯಲ್ಲಿ ಒಳಗೊಂಡಿರುವ ಉಪಬಂಧಗಳು ಕನಿಷ್ಠ ಮಾನದಂಡಗಳಾಗಿವೆ, ಗರಿಷ್ಠವಲ್ಲ ಎಂಬುದನ್ನು ಅರಿತುಕೊಳ್ಳುವುದು ತುಂಬಾ ಮುಖ್ಯ. ಪೂರೈಕೆದಾರರು ಕೆಲಸ ಸ್ಥಳದ ಸ್ಥಿತಿಗಳು ಮತ್ತು ಪರಿಸರದ ಬಗ್ಗೆ ಕಾರ್ಯದಕ್ಷತೆಯನ್ನು ನಿರಂತರವಾಗಿ ಉತ್ತಮಪಡಿಸಿಕೊಳ್ಳುತ್ತಾರೆಂದು ಪೂರೈಕೆದಾರರಿಂದ C&A ನಿರೀಕ್ಷಿಸುತ್ತದೆ.

---

1. ಉತ್ಪಾದನಾ ಘಟಕಗಳು, ಉಪಘಟಕಗಳು, ಅಫಿಲಿಯೇಟ್ಗಳು ಮತ್ತು ಏಜೆಂಟುಗಳೂ ಸೇರಿದಂತೆ. ಈ ಅಗತ್ಯಗಳು C&A ಗಾಗಿ ಮಾಡುವ ತಯಾರಿಕೆಗೆ ಮಾತ್ರವಲ್ಲದೆ ಇತರ ಯಾವುದೇ ಮೂರನೇ ಪಕ್ಷಕ್ಕೆ ಮಾಡುವ ತಯಾರಿಕೆಗೂ ಅನ್ವಯವಾಗುತ್ತವೆ.

# ಅಗತ್ಯಗಳು

## UN ಗ್ಲೋಬಲ್ ಕಾಂಪ್ಯಾಕ್ಟ್‌ನ ಹತ್ತು ತತ್ವಗಳಿಗೆ C&A ಬದ್ಧವಾಗಿದೆ.

ಪೂರೈಕೆದಾರರು ತಮ್ಮ ಕಾರ್ಯಾಚರಣೆಗಳನ್ನು ಒಂದು ಜವಾಬ್ದಾರಿಯುತ ವಿಧಾನದಲ್ಲಿ ನಡೆಸುತ್ತಾರೆ, ಹಾಗೂ ಜನರ ಮತ್ತು ಪರಿಸರ ಸಂರಕ್ಷಣೆ ಮಾಡುವುದಕ್ಕೆ ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಾರೆಂದು C&A ನಿರೀಕ್ಷಿಸುತ್ತದೆ. ಕೆಳಕಂಡ ಕೋಷ್ಟಕ ನೀತಿಸಂಹಿತೆಯ ಅಗತ್ಯಗಳನ್ನು ಒಂದು ಸಂಕ್ಷಿಪ್ತವಾದ ರೂಪದಲ್ಲಿ ಒದಗಿಸುತ್ತದೆ.

### ಅಗತ್ಯಗಳ ತಾತ್ಪರ್ಯ

#### 1. ಕಾನೂನು ಅನುಸರಣೆ

- ಎಲ್ಲಾ ಸಮಯಗಳಲ್ಲೂ ಅನ್ವಯವಾಗುವ ರಾಷ್ಟ್ರೀಯ ಮತ್ತು ಇತರ ಕಾನೂನುಗಳ ಪಾಲನೆ
- ಬೌದ್ಧಿಕ ಆಸ್ತಿ ಹಕ್ಕುಗಳಿಗೆ ಗೌರವ

#### 2. ಕಾರ್ಮಿಕರು

- ಬಾಲ ಕಾರ್ಮಿಕೆಯನ್ನು ಬಹಿಷ್ಕರಿಸುವುದು
- ಸಹಚರ್ಯ ಸ್ವಾತಂತ್ರ್ಯ ಮತ್ತು ಸಾಮೂಹಿಕ ಚೌಕಾಶಿಗೆ ಗೌರವ ನೀಡುವುದು
- ಬಲವಂತದಿಂದ ಕೆಲಸ ಮಾಡಿಸಕೂಡದು
- ಕ್ರೂರವಾದ ಮತ್ತು ಅಮಾನವೀಯ ನಡತೆ ಇರಕೂಡದು
- ಉದ್ಯೋಗದಲ್ಲಿ ಬೇಧಭಾವ ಇರಕೂಡದು
- ಸುರಕ್ಷಿತ ಮತ್ತು ನಿರ್ಮಲ ಕೆಲಸ ಪರಿಸರ ಒದಗಿಸುವುದು
- ದುರ್ಬಲ ಗುಂಪುಗಳಿಗೆ ವಿಶೇಷ ಪರಿಗಣನೆ ನೀಡುವುದು
- ನಿಯಮಿತ ಉದ್ಯೋಗ ಒದಗಿಸುವುದು
- ಜೀವನಾಧಾರ ವೇತನವನ್ನು ಸಮಯಕ್ಕೆ ಸರಿಯಾಗಿ ಪಾವತಿ ಮಾಡತಕ್ಕದ್ದು
- ಅತಿಯಾದ ಕೆಲಸದ ಅವಧಿ ಕೂಡದು

#### 3. ಪರಿಸರ

- ಕಾನೂನು ಅಗತ್ಯಗಳ ಅನುಸರಣೆ
- ಪರಿಸರ ಕಾರ್ಯದಕ್ಷತೆ ನಿರ್ವಹಣೆ
- ಶಕ್ತಿ ಮತ್ತು ನೀರಿನ ದಕ್ಷತೆ ಉತ್ತಮಪಡಿಸುವುದು
- ಪರಿಸರಕ್ಕೆ ವಿಸರ್ಜಿಸಲಾಗುವ ತ್ಯಾಜ್ಯ ಮತ್ತು ಉತ್ಸರ್ಜನೆ ಪ್ರಮಾಣ ತಗ್ಗಿಸುವುದು ಪೂರೈಕೆ ಸರಪಳಿಯಲ್ಲಿ ಅಪಾಯಕಾರಿ ರಾಸಾಯನಿಕಗಳ ಪ್ರಮಾಣ ತಗ್ಗಿಸುವುದು
- ತಗ್ಗಿಸುವುದುತಗ್ಗಿಸುವುದು

#### 4. ಭ್ರಷ್ಟಾಚಾರ-ವಿರೋಧ

- ಲಂಚ ಮತ್ತು ಭ್ರಷ್ಟಾಚಾರ ಕೂಡದು

# 1. ಕಾನೂನು ಅನುಸರಣೆ

- ಪೂರೈಕೆದಾರರು ಅನ್ವಯವಾಗುವ ರಾಷ್ಟ್ರೀಯ ಮತ್ತು ಇತರ ಕಾನೂನುಗಳನ್ನು ಎಲ್ಲಾ ಸಮಯಗಳಲ್ಲೂ ಪಾಲನೆ ಮಾಡತಕ್ಕದ್ದು
.
- ಕಾನೂನಿನ ಉಪಬಂಧಗಳು ಮತ್ತು ನೀತಿಸಂಹಿತೆ ಒಂದೇ ವಿಷಯದ ಮೇಲೆ ಸೂಚನೆಗಳನ್ನು ನೀಡಿದ್ದರೆ, ಯಾವ ಉಪಬಂಧ ಕಾರ್ಮಿಕರಿಗಾಗಲೀ ಅಥವಾ ಪರಿಸರಕ್ಕಾಗಲೀ ಹೆಚ್ಚಿನ ಮಟ್ಟದ ಸುರಕ್ಷತೆಯನ್ನು ಒದಗಿಸುತ್ತದೆಯೋ ಅದನ್ನು ಪೂರೈಕೆದಾರರು ಅನ್ವಯಿಸತಕ್ಕದ್ದು.
- ಬೌದ್ಧಿಕ ಆಸ್ತಿ ಹಕ್ಕುಗಳಿಗೆ ಗೌರವ ನೀಡಲಾಗುತ್ತಿದೆ ಎಂಬುದನ್ನು ಪೂರೈಕೆದಾರರು ಖಚಿತಪಡಿಸಿಕೊಳ್ಳತಕ್ಕದ್ದು, ಹಾಗೂ ಕಾನೂನು ವಿರೋಧಿ ಪ್ರತಿಗಳನ್ನು ಒದಗಿಸಲೂ ಕೂಡದು ಹಾಗೂ ತಯಾರಿಸಲೂ ಕೂಡದು.

# 2. ಕಾರ್ಮಿಕರು

ಈ ವಿಭಾಗದ ಅಗತ್ಯಗಳು ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ, ಜಾಗತಿಕ ಸಾಮಾಜಿಕ ಅನುಸರಣೆ ಕಾರ್ಯಕ್ರಮ (Global Social Compliance Programme) ಹಾಗೂ ನೈತಿಕ ವ್ಯಾಪಾರ ಪ್ರಯತ್ನಗಳ (Ethical Trade Initiative) ಮೂಲ ಸಂಹಿತೆ, ಇವುಗಳ ಮಾನದಂಡಗಳ ಆಧಾರವನ್ನು ಹೊಂದಿವೆ.

C&A ಮಾನವ ಹಕ್ಕುಗಳನ್ನು ಗೌರವಿಸುತ್ತದೆ, ಹಾಗೂ ಮಾನವ ಹಕ್ಕುಗಳ ನಿಂದನೆಗಳ ಬಗ್ಗೆ ಸಹಾಪರಾಧಿತ್ವವನ್ನು ನಿವಾರಣೆ ಮಾಡಲಿಚ್ಛಿಸುತ್ತದೆ. ಪೂರೈಕೆದಾರರು ಕಾರ್ಮಿಕರ ಮಾನವ ಹಕ್ಕುಗಳನ್ನು ಗೌರವಿಸುತ್ತಾರೆ, ಹಾಗೂ ಈ ವಿಭಾಗದ ಅಗತ್ಯಗಳಿಗೆ ಬದ್ಧರಾಗಿರುತ್ತಾರೆಂದು C&A ನಿರೀಕ್ಷಿಸುತ್ತದೆ.

## 2.1. ಬಾಲ ಕಾರ್ಮಿಕರು

- ಸ್ಥಳೀಯ ಕಾನೂನಿನ ಅಗತ್ಯಾನುಸಾರ, ಕಡ್ಡಾಯ ಶಿಕ್ಷಣ ನಿಯಮಾವಳಿಗಳೂ ಸೇರಿದಂತೆ, ಕಾರ್ಮಿಕರು 16 ವರ್ಷಗಳು ಅಥವಾ ಅದಕ್ಕೂ ಹೆಚ್ಚು ವಯಸ್ಸಿನ ವ್ಯಕ್ತಿಗಳಾಗಿರಬೇಕು.
- ಅಪಾಯಕರ ಕೆಲಸವನ್ನು ಮಾಡುವವರು ಅಥವಾ ರಾತ್ರಿ ಸಮಯದಲ್ಲಿ ಕೆಲಸಮಾಡುವ ಕಾರ್ಮಿಕರು ಕನಿಷ್ಠ 18 ವರ್ಷಗಳ ವಯಸ್ಸಿನವರಾಗಿರಬೇಕು.

## 2.2. ಭೇದಭಾವ

- ಪೂರೈಕೆದಾರರು ಉದ್ಯೋಗದಲ್ಲಿ[2] ತಾರತಮ್ಯ ಮಾಡುವುದರಲ್ಲಿ ತೊಡಗುವುದಾಗಲೀ, ಅದನ್ನು ಬೆಂಬಲಿಸುವುದಾಗಲೀ ಅಥವಾ ಅದನ್ನು ಸಹಿಸುವುದಾಗಲೀ ಮಾಡತಕ್ಕದ್ದಲ್ಲ.
- ಕಾರ್ಮಿಕರ ನಡುವೆ ಭಿನ್ನತೆಗೆ ಏಕೈಕ ಆಧಾರವೆಂದರೆ ಸಾಮರ್ಥ್ಯ ಮತ್ತು ಕೆಲಸ ಮಾಡುವ ಇಚ್ಛೆ ಮಾತ್ರ, ವೈಯುಕ್ತಿಕ ಗುಣಲಕ್ಷಣಗಳಲ್ಲ[3].

---

2. ನೇಮಕಾತಿ, ತರಬೇತಿ, ಕೆಲಸ ಪರಿಸ್ಥಿತಿಗಳು, ಕೆಲಸ ವಿತರಣೆ, ವೇತನ, ಬಡ್ತಿಗಳು, ಶಿಸ್ತುಪಾಲನೆ, ಕೆಲಸದಿಂದ ತೆಗೆಯುವುದು ಮತ್ತು ನಿವೃತ್ತಿ, ಇವೆಲ್ಲವೂ ಒಳಗೊಂಡಿದೆ.
3. ಅಂತಹ ವೈಯುಕ್ತಿಕ ಗುಣಲಕ್ಷಣಗಳಲ್ಲಿ ಸೇರಿರುವ ಹಾಗೂ ಅವಷ್ಯಕ್ಕೇ ಸೀಮಿತವಲ್ಲದ ಅಂಶಗಳು: ಲಿಂಗ, ವಯಸ್ಸು, ಮತ, ವೈವಾಹಿಕ ಸ್ಥಿತಿ, ಕುಲ, ಜಾತಿ, ಸಾಮಾಜಿಕ ಹಿನ್ನೆಲೆ, ಕಾಯಿಲೆಗಳು, ಅಸಮರ್ಥತೆ, ಗರ್ಭಧಾರಣೆ, ಜನಾಂಗ ಮತ್ತು ರಾಷ್ಟ್ರಮೂಲ, ರಾಷ್ಟ್ರೀಯತೆ ಕಾರ್ಮಿಕ ಸಂಘಗಳೂ ಸೇರಿದಂತೆ ಕಾರ್ಮಿಕ ಸಂಸ್ಥೆಗಳಲ್ಲಿ ಸದಸ್ಯತ್ವ, ರಾಜಕೀಯ ಧೋರಣೆ, ಹಾಗೂ ಲೈಂಗಿಕ ಪ್ರವೃತ್ತಿ.

## 2.3. ಬಲವಂತದ ಕೆಲಸ

- ಕಾರ್ಮಿಕರು ಸ್ವ-ಇಚ್ಛೆಯ ಆಧಾರದ ಮೇಲೆ ತಮ್ಮ ಕೆಲಸವನ್ನು ಮಾಡಬೇಕು, ಅಂದರೆ ಜೀತದಾಳು, ಕರಾರು ಜೀತ, ಮತ್ತು ಜೈಲು ಕಾರ್ಮಿಕರು ಮುಂತಾದ ಎಲ್ಲಾ ತರಹದ ಬಲವಂತ ಕೆಲಸ ಮಾಡಿಸುವುದನ್ನು ನಿಷೇಧಿಸಿರತಕ್ಕದ್ದು.

- ಠೇವಣಿಗಳನ್ನು ಪಡೆದುಕೊಳ್ಳುವುದು, ಗುರುತು ದಾಖಲೆಗಳನ್ನು ಉಳಿಸಿಕೊಳ್ಳುವುದು, ಅಥವಾ ವೇತನಗಳನ್ನು ಹಿಡಿದಿಟ್ಟುಕೊಳ್ಳುವುದು ಮುಂತಾದ ಕ್ರಮಗಳಿಂದ ಸ್ವತಂತ್ರ ಉದ್ಯೋಗ ಆಯ್ಕೆಗೆ ಧಕ್ಕೆ ತರುವಂತಹ ಕ್ರಮಗಳನ್ನು ಪಾಲಿಸಬಾರದು.

- ಸಮಂಜಸ ಸೂಚನೆಯ ನಂತರ ಕಾರ್ಮಿಕರು ತಮ್ಮ ಉದ್ಯೋಗ ಒಪ್ಪಂದವನ್ನು ಮುಕ್ತಾಯಗೊಳಿಸುವುದಕ್ಕೆ ಪೂರೈಕೆದಾರರು ಅವಕಾಶ ಮಾಡತಕ್ಕದ್ದು.

## 2.4. ಸಹಚರ್ಯ ಸ್ವಾತಂತ್ರ್ಯ

- ಪೂರೈಕೆದಾರರು ಕಾರ್ಮಿಕ ಪ್ರತಿನಿಧಿತ್ವದ ಬಗ್ಗೆ ಒಂದು ಮುಕ್ತ ಹಾಗೂ ಸಹಕಾರಿ ಮನೋಭಾವವನ್ನು ಹೊಂದಿರತಕ್ಕದ್ದು, ಕಾರ್ಮಿಕರು ಅವರಿಚ್ಛಾನುಸಾರ ಕಾರ್ಮಿಕ ಸಂಘವನ್ನು ಸ್ಥಾಪಿಸಲು ಅಥವಾ ಅಂತಹ ಸಂಘಗಳಲ್ಲಿ ಸದಸ್ಯತ್ವ ಹೊಂದುವುದಕ್ಕೆ, ಮತ್ತು ಸಾಮೂಹಿಕ ಚೌಕಾಶಿ ಮಾಡುವುದಕ್ಕೆ ಅವಕಾಶ ನೀಡತಕ್ಕದ್ದು.

- ತಮ್ಮ ಪ್ರತಿನಿಧಿತ್ವ ಕಾರ್ಯಗಳನ್ನು ನಿರ್ವಹಿಸಲು ಕೆಲಸ ಸ್ಥಳಗಳನ್ನು ಪ್ರವೇಶಿಸುವುದಕ್ಕೆ ಕಾರ್ಮಿಕರ ಪ್ರತಿನಿಧಿಗಳಿಗೆ ಪೂರೈಕೆದಾರರು ಅವಕಾಶ ನೀಡತಕ್ಕದ್ದು.

- ಎಲ್ಲಿ ಸಹಚರ್ಯ ಸ್ವಾತಂತ್ರ್ಯ ಹಕ್ಕು ಮತ್ತು ಸಾಮೂಹಿಕ ಚೌಕಾಶಿಗೆ ಕಾನೂನಿನ ನಿರ್ಬಂಧವಿದೆಯೋ ಅಂತಹ ಕಡೆಗಳಲ್ಲಿ ಕಾರ್ಮಿಕರು ಪರ್ಯಾಯ ಕಾರ್ಮಿಕ ಪ್ರತಿನಿಧಿತ್ವ ಮತ್ತು ಚೌಕಾಶಿಗೆ ಪೂರೈಕೆದಾರರು ಬೆಂಬಲ ಒದಗಿಸತಕ್ಕದ್ದು, ನಿರ್ಬಂಧಪಡಿಸತಕ್ಕದ್ದಲ್ಲ.

- ಆಂತರಿಕ ಕೈಗಾರಿಕಾ ವಿವಾದಗಳು ಮತ್ತು ಕಾರ್ಮಿಕರ ದೂರುಗಳನ್ನು ಪರಿಹರಿಸುವುದಕ್ಕೆ ಪೂರೈಕೆದಾರರು ಪರಿಣಾಮಕಾರಿ ವ್ಯವಸ್ಥೆಗಳನ್ನು ಜಾರಿಗೊಳಿಸತಕ್ಕದ್ದು.

## 2.5. ಕ್ರೂರವಾದ ಮತ್ತು ಅಮಾನವೀಯ ನಡತೆ

- ಪೂರೈಕೆದಾರರು ಕಾರ್ಮಿಕರನ್ನು ಗೌರವ ಮತ್ತು ಮರ್ಯಾದೆಯಿಂದ ನಡೆಸಿಕೊಳ್ಳಬೇಕು, ಹಾಗೂ ಅಂಜಿಸುವುದು[4], ಕಿರುಕುಳ ನೀಡುವುದು , ಭಯಹುಟ್ಟಿಸುವುದು, ಹಿಂಸೆ, ದೈಹಿಕ ಶಿಕ್ಷೆ ಅಥವಾ ಯಾವುದೇ ವಿಧದ ಅವಹೇಳನ[5] ಮುಂತಾದುವುಗಳಲ್ಲಿ ತೊಡಗತಕ್ಕದ್ದಲ್ಲ ಅಥವಾ ಅಂತಹ ಕ್ರಿಯೆಗಳನ್ನು ಸಹಿಸತಕ್ಕದ್ದಲ್ಲ.

- ಪೂರೈಕೆದಾರರು ಲಿಖಿತ ಶಿಸ್ತು ಸಂಹಿತೆಗಳನ್ನು ಸ್ಥಾಪಿಸಬೇಕು, ಅವುಗಳನ್ನು ತಮ್ಮ ಕಾರ್ಮಿಕರಿಗೆ ಸ್ಪಷ್ಟವಾಗಿ ವಿವರಿಸಬೇಕು, ಹಾಗೂ ತೆಗೆದುಕೊಳ್ಳಲಾದ ಎಲ್ಲ ಶಿಸ್ತು ಕ್ರಮಗಳ ಬಗ್ಗೆ ಸೂಕ್ತ ದಾಖಲೆಯನ್ನು ಇಟ್ಟುಕೊಂಡಿರಬೇಕು.

- ಶಿಸ್ತಿನ ಕ್ರಮಗಳು ಸಮಪ್ರಮಾಣದಲ್ಲಿವೆ ಎಂಬುದನ್ನು ಪೂರೈಕೆದಾರರು ಖಚಿತಪಡಿಸಿಕೊಳ್ಳಬೇಕು, ಹಾಗೂ ದೈಹಿಕ ಅಥವಾ ಮಾನಸಿಕ ದಂಡನೆ ಒಳಗೊಂಡಿರಬಾರದು.

---

4. ಲೈಂಗಿಕ ಕಿರುಕುಳವೂ ಸೇರಿದಂತೆ.
5. ದೈಹಿಕ, ಮಾನಸಿಕ ಮತ್ತು ಮೌಖಿಕ ನಿಂದನೆಗಳೂ ಸೇರಿದಂತೆ.

## 2.6. ಆರೋಗ್ಯ ಮತ್ತು ಸುರಕ್ಷತೆ

- ಪೂರೈಕೆದಾರರು ಸಾಕಷ್ಟು ಗಾಳಿ, ಬೆಳಕು ಮತ್ತು ಶಾಖವಿರುವ ಒಂದು ಸುರಕ್ಷಿತ ಮತ್ತು ನಿರ್ಮಲ ಕೆಲಸ ಸ್ಥಳವನ್ನು ಒದಗಿಸತಕ್ಕದ್ದು.

- ಕೆಲಸ ಮಾಡುವ ಸಮಯದಲ್ಲಿ ಅಪಘಾತಗಳು ಮತ್ತು ಗಾಯಗಳಾಗುವುದನ್ನು ನಿವಾರಿಸಲು, ರಾಸಾಯನಿಕಗಳ ಸುರಕ್ಷಿತ ದಾಸ್ತಾನು ಮತ್ತು ಬಳಕೆ, ಯಂತ್ರಗಳು ಮತ್ತು ಸಲಕರಣೆಗಳ ಸುರಕ್ಷತೆ, ವಿದ್ಯುತ್ ಸುರಕ್ಷತೆ, ವಸತಿ ಸೌಕರ್ಯಗಳನ್ನು ಒದಗಿಸಲಾಗಿರುವ ಕಡೆಗಳಲ್ಲಿಯೂ ಸೇರಿದಂತೆ ಕಟ್ಟಡದ ಸುರಕ್ಷತೆ, ಬಲ ಮತ್ತು ತಾಳಿಕೆ, ಹಾಗೂ ಅಗ್ನಿಪ್ರಮಾದಗಳ ವಿರುದ್ಧ ಸಾಕಷ್ಟು ಸುರಕ್ಷತಾ ವ್ಯವಸ್ಥೆಗಳು ಸಮರ್ಪಕವಾಗಿರುವಂತೆ ಪೂರೈಕೆದಾರರು ಸಾಕಷ್ಟು ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಬೇಕು.

- ಪೂರೈಕೆದಾರರು ಕಾರ್ಮಿಕರಿಗೆ ನಿಯಮಿತವಾಗಿ, ಅಗ್ನಿ ಸುರಕ್ಷತೆ ತರಬೇತಿ, ತ್ಯಾಜ್ಯ ನಿರ್ವಹಣೆ ತರಬೇತಿ ಮತ್ತು ರಾಸಾಯನಿಕಗಳು ಮತ್ತು ಇತರ ಅಪಾಯಕಾರಿ ವಸ್ತುಗಳ ನಿರ್ವಹಣೆ ತರಬೇತಿಯೂ ಸೇರಿದಂತೆ, ಆರೋಗ್ಯ ಮತ್ತು ಸುರಕ್ಷತೆ ಬಗ್ಗೆ ನಿಯಮಿತವಾಗಿ ತರಬೇತಿಯನ್ನು ಒದಗಿಸತಕ್ಕದ್ದು.

- ಪೂರೈಕೆದಾರರು ಶುಚಿಯಾದ ಶೌಚಾಲಯ ಸೌಲಭ್ಯಗಳು, ಉತ್ತಮ ನೀರು, ಹಾಗೂ ಅನ್ವಯಾನುಸಾರ, ಆಹಾರ ತಯಾರಿಕೆ ಮತ್ತು ದಾಸ್ತಾನಿಗೆ ಸ್ಯಾನಿಟರಿ ಸೌಲಭ್ಯಗಳನ್ನು ಕಲ್ಪಿಸತಕ್ಕದ್ದು.

- ಡಾರ್ಮಿಟರಿಗಳನ್ನು ಒದಗಿಸಿರುವ ಕಡೆಗಳಲ್ಲಿ ಅವುಗಳನ್ನು ಶುಭ್ರವಾಗಿ ಮತ್ತು ಸುರಕ್ಷಿತವಾಗಿಟ್ಟಿರತಕ್ಕದ್ದು, ಹಾಗೂ ಅವುಗಳು ಕಾರ್ಮಿಕರ ಪ್ರಾಥಮಿಕ ಅಗತ್ಯಗಳನ್ನು ಪೂರೈಸುವಂತಿರತಕ್ಕದ್ದು.

## 2.7. ದುರ್ಬಲರ ರಕ್ಷಣೆ

- ಕಾರ್ಮಿಕ ಪದ್ಧತಿಗಳ ಉಲ್ಲಂಘನೆಗೆ ತುತ್ತಾಗುವಂತಹ ಮಹಿಳೆಯರು, ಗೃಹ ಕೆಲಸಗಾರರು, ಏಜೆನ್ಸಿ ಕಾರ್ಮಿಕರು, ತಾತ್ಕಾಲಿಕ ಕೆಲಸಗಾರರು, ಮತ್ತು ವಲಸೆ ಕಾರ್ಮಿಕರು ಮುಂತಾದ ದುರ್ಬಲ ವರ್ಗಗಳ ಹಕ್ಕು ಸಂರಕ್ಷಣೆಗೆ ಪೂರೈಕೆದಾರರು ವಿಶೇಷ ಗಮನ ನೀಡತಕ್ಕದ್ದು.

- ಮನೆ ಕೆಲಸಗಾರರನ್ನು ನೇಮಿಸಿಕೊಳ್ಳುವಂಥ ಪೂರೈಕೆದಾರರು ನೀತಿಸಂಹಿತೆಗೆ ಹೆಚ್ಚುವರಿ ಮಾರ್ಗದರ್ಶನಗಳು ಎಂಬ ದಾಖಲೆಯಲ್ಲಿ ಸೇರಿಸಲಾಗಿರುವ ಮನೆಕಾರ್ಮಿಕರ ಬಳಕೆಗೆ C&A ಮಾರ್ಗದರ್ಶನಗಳಿಗೆ ಬದ್ಧರಾಗಿರತಕ್ಕದ್ದು.

## 2.8. ನಿಯಮಿತ ಉದ್ಯೋಗ

- ಪೂರೈಕೆದಾರರು ರಾಷ್ಟ್ರೀಯ ಕಾನೂನು ಮತ್ತು ಪ್ರಚಲಿತ ಪದ್ಧತಿಯ ಮೂಲಕ ಸ್ಥಾಪಿತವಾಗಿರುವಂಥ ಉದ್ಯೋಗ ಸಂಬಂಧಗಳ ಆಧಾರದ ಮೇಲೆ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳತಕ್ಕದ್ದು.

- ಅಂತಹ ಸಂಬಂಧಗಳಿಂದ[6] ಉದ್ಭವವಾಗುವಂತಹ ಕಾನೂನು ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನಗಳನ್ನು ಪೂರೈಕೆದಾರರು ಮಾಡಕೂಡದು.

6. ಉದಾಹರಣೆಗೆ, ಅಸಮರ್ಪಕವಾಗಿ ಅನ್ವಯಿಸಿದ ಪ್ರಶಿಕ್ಷಣ ಯೋಜನೆಗಳು ಅಥವಾ ನಿಗದಿತ-ಅವಧಿ ಒಪ್ಪಂದಗಳ ಅತೀವ ಬಳಕೆ.

## 2.9. ವೇತನ

- ಕಾರ್ಮಿಕರಿಗೆ ಕನಿಷ್ಠ ಕೂಲಿ ಮತ್ತು/ಅಥವಾ ಉದ್ಯಮ ಮಾನದಂಡ, ಇವುಗಳಲ್ಲಿ ಯಾವುದು ಹೆಚ್ಚೋ ಅದಕ್ಕೆ ಸರಿಸಮವಾದ ಅಥವಾ ಅದನ್ನು ಮೀರುವಂಥ, ವೇತನ, ಓವರ್ ಟೈಮ್ ವೇತನ, ಲಾಭಗಳು ಮತ್ತು ವೇತನಸಹಿತ ರಜೆಯನ್ನು ಪೂರೈಕೆದಾರರು ಕಾರ್ಮಿಕರಿಗೆ ಪಾವತಿ ಮಾಡತಕ್ಕದ್ದು.

- ಪೂರೈಕೆದಾರರು ಕಾರ್ಮಿಕರಿಗೆ ಓವರ್ ಟೈಮ್ ವೇತನವನ್ನು ಹೆಚ್ಚಿನ ದರದಲ್ಲಿ, ಯಾವ ಕಾರಣಕ್ಕೂ ಸಾಮಾನ್ಯ ವೇತನ ದರದ 125% ಗೆ ಕಡಿಮೆಯಿಲ್ಲದಂತೆ, ಅಥವಾ ಕಾನೂನು ಅಗತ್ಯಾನುಸಾರ ಇನ್ನೂ ಹೆಚ್ಚಿನ ದರದಲ್ಲಿ ಪಾವತಿಸತಕ್ಕದ್ದು.

- ವೇತನ ಮತ್ತು ಪರಿಹಾರಗಳನ್ನು[7] ನಿಯಮಿತವಾಗಿ ಹಾಗೂ ಸಮಯಕ್ಕೆ ಸರಿಯಾಗಿ ಪಾವತಿ ಮಾಡಬೇಕು, ಹಾಗೂ ಈ ಪಾವತಿಗಳು ಕಾರ್ಮಿಕರು ಮತ್ತು ಅವರ ಕುಟುಂಬದ ಪ್ರಾಥಮಿಕ ಅಗತ್ಯಗಳನ್ನು ಪೂರೈಸುವುದೇ ಅಲ್ಲದೆ ಅವರಿಗೆ ಮತ್ತು ಅವರ ಕುಟುಂಬಕ್ಕೆ ಒಂದು ಸ್ವಲ್ಪ ಆದಾಯ ಉಳಿಯುವಂತಿರಬೇಕು.

- ಕಾರ್ಮಿಕರ ವೇತನದಿಂದ, ರಾಷ್ಟ್ರೀಯ ಕಾನೂನುಗಳು ಅನುಮತಿಸಿಲ್ಲದ, ಅಥವಾ ಒಂದು ದಂಡನಾ ಕ್ರಮದ ರೂಪದಲ್ಲಿ ಯಾವುದೇ ಮೊತ್ತಗಳನ್ನು ಪೂರೈಕೆದಾರರು ಮುರಿದುಕೊಳ್ಳಕೂಡದು.

- ಉದ್ಯೋಗ ನಿಬಂಧನೆಗಳ ಬಗ್ಗೆ, ವೇತನದ ವಿಚಾರವೂ ಸೇರಿದಂತೆ, ಪೂರೈಕೆದಾರರು ಕಾರ್ಮಿಕರಿಗೆ ಲಿಖಿತ ಮತ್ತು ಅರ್ಥಮಾಡಿಕೊಳ್ಳಬಹುದಾದ ಮಾಹಿತಿಯನ್ನು ಉದ್ಯೋಗ ಪ್ರಾರಂಭಿಸುವುದಕ್ಕೆ ಮುಂಚೆ ಹಾಗೂ ಪ್ರತಿಸಾರಿ ವೇತನವನ್ನು ಪಾವತಿ ಮಾಡಿದಾಗ ಅದರ ವಿವರಗಳನ್ನು ಒದಗಿಸತಕ್ಕದ್ದು.

## 2.10. ಕೆಲಸದ ಅವಧಿ

- ಪೂರೈಕೆದಾರರು, ರಾಷ್ಟ್ರೀಯ ಕಾನೂನು ಅಥವಾ ಸಾಮೂಹಿಕ ಒಪ್ಪಂದಗಳಿಗನುಗುಣವಾಗಿ ನಿಶ್ಚಿತ ಕೆಲಸದ ಗಂಟೆಗಳನ್ನು ಒಪ್ಪಂದದ ಮೂಲಕ ನಿಗದಿಪಡಿಸಬೇಕು, ಈ ಅವಧಿ ಓವರ್ ಟೈಮ್ ಅವಧಿಯನ್ನು ಬಿಟ್ಟು ವಾರಕ್ಕೆ 48 ಗಂಟೆಗಳನ್ನು ಮೀರತಕ್ಕದ್ದಲ್ಲ.

- ಓವರ್ ಟೈಮ್ ಕೆಲಸವನ್ನು ಪೂರೈಕೆದಾರರು ಜವಾಬ್ದಾರಿಯುತವಾಗಿ ಬಳಸಿಕೊಳ್ಳಬೇಕು, ಪದೇ ಪದೇ ಓವರ್ ಟೈಮ್ ಕೆಲಸಕ್ಕೆ ಬೇಡಿಕೆ ಇಡಕೂಡದು, ಹಾಗೂ ಓವರ್ ಟೈಮ್ ಐಚ್ಛಿಕವಾಗಿದ್ದು, ಕಾರ್ಮಿಕರು ಓವರ್ ಟೈಮ್ ಮಾಡುವಂತೆ ಅವರ ಮೇಲೆ ಒತ್ತಡ ಹೇರತಕ್ಕದ್ದಲ್ಲ.

- ಯಾವುದೇ ಏಳು ದಿನಗಳ ಅವಧಿಯಲ್ಲಿ ಒಟ್ಟು ಕೆಲಸದ ಗಂಟೆಗಳು, ವಿಶೇಷವಾದ, ಅನಿರೀಕ್ಷಿತ ಸಂದರ್ಭಗಳನ್ನು[8] ಹೊರತುಪಡಿಸಿ, 60 ಗಂಟೆಗಳನ್ನು ಮೀರತಕ್ಕದ್ದಲ್ಲ.

- ಕಾರ್ಮಿಕರು ಬಿಡುವು ತೆಗೆದುಕೊಳ್ಳುವುದಕ್ಕೆ ಪೂರೈಕೆದಾರರು ಅವಕಾಶ ನೀಡತಕ್ಕದ್ದು, ಪ್ರತಿ ಏಳು ದಿನಗಳ ಅವಧಿಯಲ್ಲಿ[9] ಒಂದು ದಿನ ರಜೆ ಹಾಗೂ ಸರ್ಕಾರಿ ರಜಾದಿನಗಳನ್ನು ಪಡೆಯಬೇಕು.

---

7. ಸಾಮಾನ್ಯ ಕೆಲಸದ ಗಂಟೆಗಳು, ಅಂದರೆ ಓವರ್ ಟೈಮ್ ಇಲ್ಲದೆ.
8. ಕೆಳಕಂಡ ನಿಬಂಧನೆಗಳು ಪೂರೈಸಿದ ಪಕ್ಷದಲ್ಲಿ ಮಾತ್ರ ಇದನ್ನು ಸೇರಿಸಿ: 1) ರಾಷ್ಟ್ರೀಯ ಕಾನೂನು ಅನುಮತಿಸಿದ್ದರೆ, 2) ಸಾಮೂಹಿಕ ಒಪ್ಪಂದದ ಮೂಲಕ ಅನುಮತಿಸಿದ್ದರೆ, ಮತ್ತು 3) ಕೆಲಸಗಾರರ ಆರೋಗ್ಯ ಮತ್ತು ಸುರಕ್ಷತೆಯನ್ನು ಕಾಪಾಡಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗಿದ್ದರೆ.
9. ಅಥವಾ ರಾಷ್ಟ್ರೀಯ ಕಾನೂನು ಅನುಮತಿಸಿರುವ ಕಡೆಗಳಲ್ಲಿ ಪ್ರತಿ 14 ದಿನಗಳ ಅವಧಿಯಲ್ಲಿ ಎರಡು ದಿನ ರಜೆ.

# 3. ಪರಿಸರ

ಒಂದು ಕೈಗಾರಿಕೆಯ ಭವಿಷ್ಯದ ಯಶಸ್ಸಿನ ಮೂಲಭೂತ ಅಂಶ ಪರಸರ ಕಾರ್ಯದಕ್ಷತೆ ಎಂಬುದನ್ನು C&A ನಂಬುತ್ತದೆ. ಹಾಗಾಗಿ, ಕಾಲಾನುಕ್ರಮದಲ್ಲಿ ಪೂರೈಕೆದಾರರು ಕೇವಲ ಅನುಸರಣೆ ಮಾಡುವುದಷ್ಟೇ ಅಲ್ಲದೆ ಸಕ್ರಿಯವಾಗಿ ಪರಿಸರ ಕಾರ್ಯದಕ್ಷತೆಯನ್ನು ಹೆಚ್ಚಿಸಿಕೊಳ್ಳುತ್ತಾರೆಂದು C&A ನಿರೀಕ್ಷಿಸುತ್ತದೆ. ಅಗತ್ಯಾನುಸಾರ, ಈ ಬದ್ಧತೆಯನ್ನು ಸಾಧಿಸಲು ಈ ನಿಟ್ಟಿನಲ್ಲಿ ಪೂರೈಕೆದಾರರಿಗೆ ಸಹಾಯಮಾಡಲು ಅವರೊಂದಿಗೆ C&A ನಿಕಟವಾಗಿ ಕೆಲಸ ಮಾಡುತ್ತದೆ.

## 3.1. ಕಾನೂನು ಅನುಸರಣೆ

- ಅನ್ವಯವಾಗುವಂತಹ ಎಲ್ಲ ಸ್ಥಳೀಯ ಮತ್ತು ರಾಷ್ಟ್ರೀಯ ಪರಿಸರ ಸಂರಕ್ಷಣೆ ಕಾನೂನುಗಳನ್ನು ಪೂರೈಕೆದಾರರು ಪಾಲಿಸತಕ್ಕದ್ದು, ಹಾಗೂ ಅಂತಾರಾಷ್ಟ್ರೀಯ ಪರಿಸರ ಸಂರಕ್ಷಣೆ ಮಾನದಂಡಗಳನ್ನು ಸಾಧಿಸುವ ಗುರಿಯನ್ನು ಹೊಂದಿರತಕ್ಕದ್ದು.
- ಪೂರೈಕೆದಾರರು ಎಲ್ಲ ಅಗತ್ಯ ಪರಿಸರ ಪರವಾನಗಿಗಳನ್ನು ಪಡೆದಿರತಕ್ಕದ್ದು ಹಾಗೂ ಅವುಗಳನ್ನು ಇತ್ತೀಚಿನ ನಿಯಮಾನುಸಾರ ಇರಿಸತಕ್ಕದ್ದು.

## 3.2. ಪರಿಸರ ಕಾರ್ಯದಕ್ಷತೆ ನಿರ್ವಹಣೆ

- ಪೂರೈಕೆದಾರರು ಒಂದು ಪರಿಸರ ನಿರ್ವಹಣಾ ವ್ಯವಸ್ಥೆಯನ್ನು[10] ಸ್ಥಾಪಿಸಿರತಕ್ಕದ್ದು, ಹಾಗೂ ಪರಿಸರ ನಿರ್ವಹಣಾ ಕಾರ್ಯದಕ್ಷತೆಯ ಜವಾಬ್ದಾರಿಯನ್ನು ಒಬ್ಬ ಹಿರಿಯ ಆಡಳಿತ ಪ್ರತಿನಿಧಿಗೆ ವಹಿಸಿರತಕ್ಕದ್ದು.
- ಪೂರೈಕೆದಾರರು ಶಕ್ತಿ ಮತ್ತು ನೀರಿನ ಬಳಕೆಯನ್ನು, ಪರಿಸರಕ್ಕೆ ಬಿಡುಗಡೆ ಮಾಡಲಾಗುವ ಉತ್ಸರ್ಜನೆಗಳು, ಮತ್ತು ತ್ಯಾಜ್ಯ ವಿಲೇವಾರಿಯ ಪ್ರಮಾಣವನ್ನು ಅಳೆಯಬೇಕು, ಹಾಗೂ ಬೇಡಿಕೆ ನೀಡಿದಾಗ ಈ ಮಾಹಿತಿಯನ್ನು C&A ಗೆ ಒದಗಿಸತಕ್ಕದ್ದು.
- ಪರಿಸರದ ಪರಿಣಾಮಗಳನ್ನು ವ್ಯಾಪಾರ ನಿರ್ಣಯಗಳಿಗೆ ಪೂರೈಕೆದಾರರು ಸಮನ್ವಯಗೊಳಿಸಬೇಕು, ಪರಿಸರ ನಿರ್ವಹಣಾ ಕಾರ್ಯದಕ್ಷತೆಯನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಪ್ರಗತಿಪರ ಮನೋಭಾವನೆಯನ್ನು ತಳೆಯಬೇಕು, ಹಾಗೂ ಇದನ್ನು ಅವರ ಪೂರೈಕೆದಾರರು ಮತ್ತು ಉಪಗುತ್ತಿಗೆದಾರರು ಕೂಡ ಪಾಲಿಸುವುದನ್ನು ಖಚಿತಪಡಿಸಿಕೊಳ್ಳಬೇಕು.

## 3.3. ಆಕರ ಬಳಕೆ ಮತ್ತು ಹವಾಗುಣ ಬದಲಾವಣೆ

- • ಪೂರೈಕೆದಾರರು ಶಕ್ತಿಯ ಕಾರ್ಯದಕ್ಷತೆಯನ್ನು ಕಟ್ಟಡಗಳಲ್ಲಿ, ಸಾಗಣೆ ಮತ್ತು ಉತ್ಪಾದನಾ ಕ್ರಿಯೆಗಳಲ್ಲಿ ನಿರಂತರವಾಗಿ ಉತ್ತಮಪಡಿಸುತ್ತಿರಬೇಕು, ಹಾಗೂ ಸಾಧ್ಯವಾದಷ್ಟುಮಟ್ಟಿಗೂ ನವೀಕರಿಸಬಹುದಾದ ಅಥವಾ ಇಂಗಾಲ ತೀವ್ರತೆ ಕಡಿಮೆಯಿರುವ ಶಕ್ತಿ ಮೂಲಗಳನ್ನು ಬಳಸತಕ್ಕದ್ದು.
- ತೇವ ಪ್ರಕ್ರಿಯೆಗಳನ್ನು ಹೊಂದಿರುವ ಪೂರೈಕೆದಾರರು ನೀರಿನ ದಕ್ಷತೆಯನ್ನು ನಿರಂತರವಾಗಿ ಹೆಚ್ಚಿಸುವಂತಹ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.
- ತಮ್ಮ ಖರೀದಿ ನಿರ್ಣಯಗಳಿಂದ ಅರಣ್ಯನಾಶ, ಪ್ರಾಣಿಗಳ ಬಗ್ಗೆ ನಿರ್ದಯೆ, ಅಥವಾ ದುರ್ಬಲ ಪರಿಸರ ವ್ಯವಸ್ಥೆಗಳ ಮೇಲೆ ಅಥವಾ ಅಪಾಯದ ಅಂಚಿನಲ್ಲಿರುವ ಸಂತತಿಗಳ[11] ಮೇಲೆ ಪ್ರತಿಕೂಲ ಪರಿಣಾಮ ಉಂಟಾಗದಂತೆ ಪೂರೈಕೆದಾರರು ಸಮಂಜಸ ಪ್ರಯತ್ನಗಳನ್ನು ಮಾಡತಕ್ಕದ್ದು.

---

10. ಒಂದು ಪರಿಸರ ನಿರ್ವಹಣಾ ವ್ಯವಸ್ಥೆ ಎನ್ನುವುದು ಪರಿಸರ ಕಾರ್ಯದಕ್ಷತೆಯನ್ನು ಅಳೆಯುವ, ನಿರ್ವಹಣೆ ಮಾಡುವ ಮತ್ತು ವರದಿ ಮಾಡುವ ವಿಧಾನಗಳು ಲಿಖಿತ ನೀತಿಗಳು, ಯೋಜನಾ ಸಲಕರಣೆಗಳು, ಇವುಗಳನ್ನು ಹೊಂದಿರುವ ಒಂದು ವ್ಯವಸ್ಥೆ.
11. CITES ಮತ್ತುIUCN ರೆಡ್ ಲಿಸ್ಟ್ ನಲ್ಲಿ ನಿರೂಪಿಸಲಾಗಿರುವಂತೆ.

### 3.4. ತ್ಯಾಜ್ಯ ಮತ್ತು ಉತ್ಸರ್ಜನೆಗಳು

- ಪೂರೈಕೆದಾರರು ವಿನ್ಯಾಸ ಮತ್ತು ಕಾರ್ಯಾಚರಣೆ ದಕ್ಷತೆಯ ಮೂಲಕ ತ್ಯಾಜ್ಯವನ್ನು ಕಡಿಮೆ ಮಾಡಬೇಕು ಮತ್ತು ಸಾಧ್ಯವಿರುವ ಕಡೆಗಳಲ್ಲಿ ಮರುಬಳಕೆ ಮತ್ತು ಮರುಸಂಸ್ಕರಣೆ ಮಾಡತಕ್ಕದ್ದು.

- ಪೂರೈಕೆದಾರರು ನೀರನ್ನು ವಿಸರ್ಜನೆ ಮಾಡುವ ಮೊದಲು ಅದನ್ನು ಸೂಕ್ತವಾಗಿ ಸಂಸ್ಕರಿಸತಕ್ಕದ್ದು, ಎಲ್ಲಾ ರಾಷ್ಟ್ರೀಯ ಮತ್ತು ಸ್ಥಳೀಯ ನೀರು ವಿಸರ್ಜನೆ ಅನುಸರಣಾ ಮಾನದಂಡಗಳ ಅಗತ್ಯಗಳನುಸಾರ ನೀರನ್ನು ಪರೀಕ್ಷೆ ಮಾಡತಕ್ಕದ್ದು, ಹಾಗೂ ತ್ಯಾಜ್ಯ ನೀರಿನ ಗುಣಮಟ್ಟ ಮಾಹಿತಿಯನ್ನು ಭಾಗೀದಾರರೊಂದಿಗೂ, ಹಾಗೂ ಬೇಡಿದಾಗ C&A ಯೊಂದಿಗೂ ಹಂಚಿಕೊಳ್ಳತಕ್ಕದ್ದು.

- ಪೂರೈಕೆದಾರರು ಶಬ್ದಮಾಲಿನ್ಯವನ್ನು ಕಡಿಮೆಮಾಡಲು ಮತ್ತು ವಾತಾವರಣಕ್ಕೆ, ಮಣ್ಣಿಗೆ ಮತ್ತು ಭೂಜಲಕ್ಕೆ ಉತ್ಸರ್ಜನೆಯನ್ನು ಕಡಿಮೆಮಾಡಲು ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

### 3.5. ಅಪಾಯಕಾರಿ ರಾಸಾಯನಿಕಗಳು

- ಪೂರೈಕೆ ಸರಪಣಿಯಿಂದ ಅಪಾಯಕಾರಿ ವಸ್ತುಗಳನ್ನು ನಿರ್ಮೂಲ ಮಾಡುವ ನಿಟ್ಟಿನಲ್ಲಿ ಪೂರೈಕೆದಾರರು C&A ಯೊಂದಿಗೆ ಮತ್ತು ತಮ್ಮ ತಮ್ಮ ಪೂರೈಕೆದಾರರೊಂದಿಗೆ ಕೆಲಸ ಮಾಡಬೇಕು.

## 4. ಭ್ರಷ್ಟಾಚಾರ-ವಿರೋಧ

ಪೂರೈಕೆದಾರರು ವ್ಯಾಪಾರ ವಹಿವಾಟುಗಳಲ್ಲಿ ಅತ್ಯಂತ ಉನ್ನತ ನೈತಿಕ ಮಟ್ಟಗಳನ್ನು ಕಾಪಾಡಿಕೊಳ್ಳುತ್ತಾರೆಂದು C&A ನಿರೀಕ್ಷಿಸುತ್ತದೆ.

- ಪೂರೈಕೆದಾರರು ಅನ್ವಯವಾಗುವಂತಹ ಎಲ್ಲಾ ಲಂಚ-ವಿರೋಧಿ ಮತ್ತು ಭ್ರಷ್ಟಾಚಾರ ಕಾನೂನುಗಳನ್ನು ಪಾಲಿಸತಕ್ಕದ್ದು.

- ಪೂರೈಕೆದಾರರು, ಕೆಲಸಗಳನ್ನು ಸುಗಮಗೊಳಿಸಲು ಮಾಡುವಂತಹ ಪಾವತಿಗಳೂ ಸೇರಿದಂತೆ ಯಾವುದೇ ಲಂಚಗಳನ್ನು ಸ್ವೀಕರಿಸಕೂಡದು ಹಾಗೂ ಕೊಡಕೂಡದು.

- ಪೂರೈಕೆದಾರರು ಒಂದು ಭ್ರಷ್ಟಾಚಾರ-ವಿರೋಧ ನೀತಿಯನ್ನು ಮತ್ತು ವಿಧಾನಗಳನ್ನು ಹೊಂದಿರತಕ್ಕದ್ದು, ಹಾಗೂ ಅವು ಪರಿಣಾಮಕಾರಿಯಾಗಿ ಕೆಲಸಮಾಡುತ್ತಿವೆ ಎಂಬುದನ್ನು ಖಚಿತಪಡಿಸಿಕೊಳ್ಳಲು ನಿಯಮಿತವಾಗಿ ಅವುಗಳನ್ನು ಪುನರ್ ಪರಿಶೀಲನೆ ಮಾಡಬೇಕು.

# ನೀತಿಸಂಹಿತೆಗೆ ಬದ್ಧತೆಯನ್ನು ಖಚಿತಪಡಿಸುವುದು

ನೀತಿಸಂಹಿತೆಯ ಅಗತ್ಯಗಳನ್ನು ಸಂಪೂರ್ಣವಾಗಿ ಪೂರೈಸುವುದು ಒಂದು ದೊಡ್ಡ ಸವಾಲು ಎಂಬುದನ್ನು C&A ಗುರುತಿಸುತ್ತದೆ, ಆದರೆ C&A ಮತ್ತು ಅದರ ಪೂರೈಕೆದಾರರ ಭವಿಷ್ಯದ ವಾಣಿಜ್ಯ ಯಶಸ್ಸಿಗೆ ಇದು ತುಂಬಾ ಮುಖ್ಯ ಎಂದು ನಂಬುತ್ತದೆ.

ನೀತಿಸಂಹಿತೆಗೆ ಬದ್ಧರಾಗಿರುವುದು ನಮ್ಮ ಗುಣಮಟ್ಟ ಮಾನದಂಡಗಳು ಅಥವಾ ಡೆಲಿವರಿ ನಿಬಂಧನೆಗಳನ್ನು ಪೂರೈಸುವುದಕ್ಕಿಂತ ಕಡಿಮೆಯೇನಲ್ಲ. ಮುಕ್ತ, ಪ್ರಾಮಾಣಿಕ ಮತ್ತು ನಿರಂತರ ಉತ್ತಮತೆಗೆ ಬದ್ಧರಾಗಿರುವಂಥ ಪೂರೈಕೆದಾರರೊಂದಿಗೆ ಕೆಲಸ ಮಾಡುವುದಕ್ಕೆ C&A ಸರ್ವ ಪ್ರಯತ್ನಗಳನ್ನೂ ಮಾಡುತ್ತದೆ, ಹಾಗೂ ಅಗತ್ಯಗಳನ್ನು ಸಾಧಿಸಲು ಅವರಿಗೆ ಬೆಂಬಲವನ್ನು ಒದಗಿಸುತ್ತದೆ.

## 1. ಕಾರ್ಯದಕ್ಷತೆ ನಿರ್ವಹಣೆ

- ನೀತಿಸಂಹಿತೆಗೆ ಸಕ್ರಿಯವಾಗಿ ಬದ್ಧತೆಯನ್ನು ಖಚಿತಪಡಿಸಿಕೊಳ್ಳಲು ಪೂರೈಕೆದಾರರು ಒಂದು ಪರಿಣಾಮಕಾರಿ ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸಿರತಕ್ಕದ್ದು, ಹಾಗೂ ಅದರ ಅನುಸರಣೆ ಜವಾಬ್ದಾರಿಯನ್ನು ಒಬ್ಬ ಹಿರಿಯ ಆಡಳಿತ ಪ್ರತಿನಿಧಿಗೆ ವಹಿಸಿರತಕ್ಕದ್ದು.

- ಕಾರ್ಮಿಕರಿಗೆ ನೀತಿಸಂಹಿತೆಯ ಅಗತ್ಯಗಳ ಬಗ್ಗೆ ತಿಳಿದಿರುವಂತೆ ಪೂರೈಕೆದಾರರು ನೋಡಿಕೊಳ್ಳತಕ್ಕದ್ದು, ಹಾಗೂ ಅವುಗಳನ್ನು ಹೇಗೆ ಸಾಧಿಸಬಹುದು ಎಂಬ ಬಗ್ಗೆ ಮ್ಯಾನೇಜರುಗಳಿಗೆ ಮತ್ತು ಸೂಪರ್ವೈಸರ್‌ಗಳಿಗೆ ತರಬೇತಿ ನೀಡತಕ್ಕದ್ದು.

- ಪೂರೈಕೆದಾರರು ನಿಯಮಿತವಾಗಿ ಆಂತರಿಕ ಮೌಲ್ಯಮಾಪನವನ್ನು ಕೈಗೊಳ್ಳಬೇಕು.

- ಪೂರೈಕೆದಾರರು, ತಯಾರಿಕೆ ಆರಂಭಿಸುವುದಕ್ಕೆ ಮುಂಚೆ, ತಮ್ಮ ತಯಾರಿಕಾ ಘಟಕಗಳಿಗೆ, ಅದು ಸ್ವಂತದ್ದಾಗಿರಬಹುದು ಅಥವಾ ಉಪಗುತ್ತಿಗೆಯದಾಗಿರಬಹುದು, C&A ಯಿಂದ ಅನುಮೋದನೆಯನ್ನು ಪಡೆಯತಕ್ಕದ್ದು. ಅನಧಿಕೃತ ಉತ್ಪಾದನಾ ಘಟಕವನ್ನು ಬಳಸುವುದಕ್ಕೆ ನಿಷೇಧವಿದೆ.

- ಪೂರೈಕೆದಾರರು ಉತ್ಪಾದನಾ ಪ್ರಕ್ರಿಯೆಯ ಯಾವುದೇ ಭಾಗವನ್ನು C&A ಪೂರ್ವಾನುಮತಿಯಿಲ್ಲದೆ ಉಪಗುತ್ತಿಗೆಗೆ ಕೊಡಕೂಡದು, ಹಾಗೂ a) ಉಪಗುತ್ತಿಗೆದಾರ ನೀತಿಸಂಹಿತೆಯ ಅನುಸರಣೆ ಮಾಡಲು ಅಂಗೀಕರಿಸಿದ್ದರೆ, ಮತ್ತು b) ಉಪಗುತ್ತಿಗೆದಾರ ಒಂದು ಆಡಿಟ್ ಪ್ರಕ್ರಿಯೆಯಲ್ಲಿ ತೇರ್ಗಡೆಯಾಗಿದ್ದರೆ, ಈ ಸಂದರ್ಭಗಳಲ್ಲಿ ಉಪಗುತ್ತಿಗೆಗೆ ನೀಡಬಹುದಾಗಿದೆ.

- ಉಪಗುತ್ತಿಗೆದಾರರು ನೀತಿಸಂಹಿತೆಯ ಅನುಸರಣೆ ಮಾಡುತ್ತಾರೆಂಬುದನ್ನು ಖಚಿತಪಡಿಸಿಕೊಳ್ಳುವುದು ಪೂರೈಕೆದಾರರ ಜವಾಬ್ದಾರಿಯಾಗಿರುತ್ತದೆ.

## 2. ಮೇಲ್ವಿಚಾರಣೆ ಮತ್ತು ಪಾರದರ್ಶಕತೆ

- C&A ಮತ್ತು/ಅಥವಾ ಅದರ ಪ್ರತಿನಿಧಿಗಳು, ಪ್ರಕಟಿತ ಅಥವಾ ಅಪ್ರಕಟಿತ ಮೌಲ್ಯಮಾಪನಗಳನ್ನು ಮಾಡುವುದಕ್ಕೆ ಪೂರೈಕೆದಾರರು ಅನುವು ಮಾಡಿಕೊಡಬೇಕು.

- ಮೌಲ್ಯಮಾಪನ ಮಾಡುವಾಗ ಪೂರೈಕೆದಾರರು ಸಹಕರಿಸಬೇಕು ಮತ್ತು ಪಾರದರ್ಶಕರಾಗಿರಬೇಕು ಹಾಗೂ ಕಾರ್ಮಿಕರನ್ನು, ಕೆಲಸಸ್ಥಳವನ್ನು, ಶಯನಗೃಹಗಳನ್ನು ಭೇಟಿಮಾಡಲು, ದಾಖಲೆಗಳನ್ನು ಪರಿಶೀಲಿಸಲು ಅನಿರ್ಬಂಧಿತ ಪ್ರವೇಶವನ್ನು ಒದಗಿಸಬೇಕು.

- ಕೆಲಸಗಾರರೊಂದಿಗೆ ಖಾಸಗಿಯಾಗಿ ಸಂದರ್ಶನ ನಡೆಸಲು ಪೂರೈಕೆದಾರರು ಅನುವು ಮಾಡಿಕೊಡಬೇಕು ಹಾಗೂ ಪ್ರಶ್ನೆಗಳಿಗೆ ಯಾವ ಉತ್ತರಗಳನ್ನು ಕೊಡಬೇಕು ಎಂಬುದನ್ನು ಬೋಧಿಸಕೂಡದು.

- ಅನುಸರಣೆಯನ್ನು ಪರಿಣಾಮಕಾರಿಯಾಗಿ ಮೌಲ್ಯಮಾಪನ ಮಾಡಲು ಪೂರೈಕೆದಾರರು ಸಂಪೂರ್ಣ ಮತ್ತು ಕರಾರುವಕ್ಕಾದ ದಾಖಲೆಗಳನ್ನು[12] ನಿರ್ವಹಿಸತಕ್ಕದ್ದು, ಹಾಗೂ ಮಾಹಿತಿಯನ್ನು ತಾರುಮಾರು ಮಾಡುವುದು ಅಥವಾ ತಮ್ಮ ಕಾರ್ಯಾಚರಣೆಗಳ ಬಗ್ಗೆ ತಪ್ಪು ವಿವರ ನೀಡುವುದು ಇತ್ಯಾದಿಗಳನ್ನು ಮಾಡತಕ್ಕದ್ದಲ್ಲ.

- ಪೂರೈಕೆದಾರರ ಹೆಸರುಗಳು, ಇರುವ ಸ್ಥಳ, ಮತ್ತು ಉತ್ಪಾದನಾ ಘಟಕಗಳು, ಹಾಗೂ ನೀತಿಸಂಹಿತೆ ಅನುಸರಣೆಯಲ್ಲಿ ಅವರ ಕಾರ್ಯದಕ್ಷತೆ ಬಗ್ಗೆ ಮೂರನೇ ಪಕ್ಷಗಳಿಗೆ C&A ಬಹಿರಂಗಪಡಿಸಲು ಪೂರೈಕೆದಾರರು ಅನುಮತಿಸಬೇಕು

- C&A ಮತ್ತು/ಅಥವಾ ಅದರ ಪ್ರತಿನಿಧಿಗಳು ಪೂರೈಕೆದಾರರ ಸ್ವಂತ ಪೂರೈಕೆದಾರರು ಮತ್ತು ಉಪಗುತ್ತಿಗೆದಾರರ ಸ್ಥಳದಲ್ಲಿ C&A ಬೇಡಿಕೆ ಮೇರೆಗೆ, ತಪಾಸಣೆಗಳನ್ನು ಮಾಡುವುದಕ್ಕೆ ಅಗತ್ಯ ಸಹಕಾರ ಒದಗಿಸಬೇಕು.

## 3. ನಿರ್ಬಂಧಗಳು

- C&A ಫೇರ್ನೆಸ್ ಚಾನೆಲ್ ಎಂಬ ಒಂದು ಗೌಪ್ಯವಾದ ಎಚ್ಚರಿಕೆ ಗಂಟೆ ವ್ಯವಸ್ಥೆಯನ್ನು ಹೊಂದಿದೆ, ಇದರ ಮೂಲಕ ಪೂರೈಕೆದಾರರೂ ಸೇರಿದಂತೆ ಎಲ್ಲಾ ಭಾಗೀದಾರರು, ಕಾರ್ಖಾನೆ ಕಾರ್ಮಿಕರು ಮತ್ತು C&A ಉದ್ಯೋಗಿಗಳು ಯಾವುದೇ ಅನೈತಿಕ ನಡವಳಿಕೆ ಅಥವಾ ನೀತಿಸಂಹಿತೆಯ ಉಲ್ಲಂಘನೆಗಳನ್ನು C&A ಯ ಉನ್ನತ ಆಡಳಿತ ವ್ಯವಸ್ಥೆಗೆ ವರದಿ ಮಾಡಬಹುದಾಗಿದೆ.

- ನೀತಿಸಂಹಿತೆಯ ಉಲ್ಲಂಘನೆಗಳ ಪ್ರಕರಣಗಳಲ್ಲಿ ಪೂರೈಕೆದಾರರು ಒಂದು ಸುಧಾರಣಾ ಯೋಜನೆಯನ್ನು, ಅಗತ್ಯಾನುಸಾರ C&A ಬೆಂಬಲದೊಂದಿಗೆ, ಅಭಿವೃದ್ಧಿಪಡಿಸಬೇಕೆಂದು C&A ಪೂರೈಕೆದಾರನನ್ನು ಕೇಳುತ್ತದೆ, ಹಾಗೂ ಅದನ್ನು ಒಂದು ನಿಗದಿತ ಸಮಯಾವಧಿಯಲ್ಲಿ ಜಾರಿಗೊಳಿಸಬೇಕು, ಹಾಗೂ ಈ ಸಮಯಾವಧಿ ಉಲ್ಲಂಘನೆಯ ಸ್ವರೂಪದ ಮೇಲೆ ವ್ಯತ್ಯಾಸವಾಗುತ್ತದೆ.

- ಅತಿಶಯವಾದ ಉಲ್ಲಂಘನೆ ಪ್ರಕರಣಗಳಲ್ಲಿ, ಬಾಲ ಕಾರ್ಮಿಕರು, ಬಲವಂತ ಅಥವಾ ಖೈದಿ ಕೂಲಿ, ಲಂಚ, ಮೋಸ, ನಕಲಿ ಭಾಗಗಳ ಬಳಕೆ, ಹಾಗೂ ಅನಧಿಕೃತ ಉತ್ಪಾದನಾ ಘಟಕಗಳ ಬಳಕೆ, ಮತ್ತು/ಅಥವಾ ಅಂಗೀಕೃತ ಸುಧಾರಣಾ ಯೋಜನೆಗಳನ್ನು ಜಾರಿಗೆ ತರುವಲ್ಲಿ ವಿಫಲತೆ, ಇವುಗಳಿಗೇ ಸೀಮಿತವಲ್ಲದೆ, ಅಂತಹ ಯಾವ ರೀತಿಯ ಉಲ್ಲಂಘನೆಯಾದರೂ, ಬಾಕಿಯಿರುವ ಆದೇಶಗಳನ್ನು ರದ್ದುಮಾಡುವುದೂ ಸೇರಿದಂತೆ ಪೂರೈಕೆದಾರನೊಂದಿಗೆ ವ್ಯಾಪಾರ ಸಂಬಂಧವನ್ನು ಮುರಿಯುವ ಹಕ್ಕನ್ನು C&A ಕಾದಿರಿಸಿಕೊಂಡಿದೆ.

- ನೀತಿಸಂಹಿತೆಯ ಉಲ್ಲಂಘನೆ ಮಾಡುವುದರಿಂದ C&A ಗೆ ಸಂಭವಿಸಬಹುದಾದ ಯಾವುದೇ ಹಾನಿ ವೆಚ್ಚಗಳನ್ನು, ಗಳಿಕೆ ನಷ್ಟ ಮತ್ತು/ಅಥವಾ ಲಾಭಗಳ ಮೇಲೆ ಆಗುವ ಪರಿಣಾಮವೂ ಸೇರಿದಂತೆ, ಎಲ್ಲ ಹಾನಿಗಳಿಗೂ C&A ಯು ಅವರ ಉಪಗುತ್ತಿಗೆದಾರ(ರು) ಸೇರಿದಂತೆ ಪೂರೈಕೆದಾರರನ್ನು ಹೊಣೆಗಾರರನ್ನಾಗಿ ಮಾಡುತ್ತದೆ.

12. ಉದಾಹರಣೆಗೆ, ಕೆಲಸ-ಗಂಟೆಗಳ ದಾಖಲೆಗಳು ಮತ್ತು ವೇತನ ಪಾವತಿ ದಾಖಲೆಗಳು.

ಉತ್ತಮ ಕಾರ್ಮಿಕ ಪರಿಸ್ಥಿತಿಗಳ ನಿರ್ಮಾಣ ಮತ್ತು ಉತ್ತಮ ಪರಿಸರ ಕಾರ್ಯದಕ್ಷತೆಗೆ ಪ್ರಾಮಾಣಿಕವಾಗಿ ಬದ್ಧರಾಗಿರುವ  ಪೂರೈಕೆದಾರರೊಂದಿಗೆ C&A ದೀರ್ಘಕಾಲಿಕ ಸಂಬಂಧವನ್ನು ಬೆಳೆಸಿಕೊಳ್ಳಲು ಇಚ್ಛಿಸುತ್ತದೆ, ಹಾಗೂ ಅವರು ಎದುರಿಸುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಹಾಯ ಮಾಡುತ್ತದೆ. ನೀತಿಸಂಹಿತೆಯನ್ನು ಜಾರಿಗೊಳಿಸಲು ಹೆಚ್ಚಿನ ಸ್ಪಷ್ಟೀಕರಣ ಮತ್ತು ಮಾರ್ಗದರ್ಶನಕ್ಕಾಗಿ ನೀತಿಸಂಹಿತೆಗೆ ಹೆಚ್ಚುವರಿ ಮಾರ್ಗದರ್ಶನಗಳು, ದಾಖಲೆಯನ್ನು ನೋಡಿ; ಇದನ್ನು ನಿಯಮಿತವಾಗಿ ಪರಿಷ್ಕರಿಸಲಾಗುತ್ತದೆ.